ದಿನಾಂಕ: 16 ಮಾರ್ಚ್ 2014

# ಅಮೃತಸರದ ಅಭ್ಯರ್ಥಿಯಾದ ನಾನು


-ಅರುಣ್ ಜೇಟ್ಲಿ

(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)


ಅಮೃತಸರ ಸಂಸದೀಯ ಲೋಕ ಸಭಾ ಮತಕ್ಷೇತ್ರದಿಂದ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಅವಕಾಶ ನೀಡಿದ ಭಾಜಪಗೆ ನಾನು ಚಿರರುಣಿ.

ಬಹಳ ಚಿಕ್ಕ ವಯ್ಯಸ್ಸಿನಲ್ಲೇ 1970ರಲ್ಲಿ ರಾಜಕೀಯ ಕಾರ್ಯಕರ್ತನಾಗಿ ಕಾರ್ಯವಹಿಸಿದ್ದೆ. ಅಂದು ನಾನು ಎಬಿವಿಪಿ ಜೊತೆಯಿದ್ದೆ. ನನ್ನ ಕಾಲೇಜಿನಲ್ಲಿ ಚುನಾವಣೆಯನ್ನು ಯಶಸ್ವಿಯಾಗಿ ಎದುರಿಸಿದ್ದೆ ಹಾಗೂ ದೆಹಲಿ ವಿಶ್ವವಿದ್ಯಾಲಯದಲ್ಲೂ ಅದನ್ನು ಮುಂದುವರಿಸಿದ್ದೆ. ಭ್ರಷ್ಟಾಚಾರ ಹಾಗೂ ತುರ್ತುಪರಿಸ್ಥಿತಿಯ ವಿರುದ್ಧ ಮೂಡಿದ ಜೆಪಿ ನೇತೃತ್ವದ ಚಳುವಳಿಯಲ್ಲಿ ಭಾಗವಹಿಸದ್ದ ನನ್ನ ಜೀವನದ ದಿಕ್ಕು ಬದಲಾಯಿತು. ಮೊದಲನೆ ದಿನವೇ ನಾನು ತುರ್ತುಪರಿಸ್ಥಿತಿಯ ವಿರುದ್ಧ ಸತ್ಯಾಗ್ರಹ ಹೂಡಿದೆ ಹಾಗೂ 19 ತಿಂಗಳುಗಳ ಸೆರೆವಾಸ ಅನುಭವಿಸಿದೆ. ಈ ಅವಧಿಯಲ್ಲಿ ನನ್ನ ತತ್ವಸಿದ್ಧಾಂತಗಳು ಪರಿಪಕ್ವತೆ ಗಳಿಸಿತು.

ಭಾಜಪ ಅಸ್ತಿತ್ವಕ್ಕೆ ಬಂದಾಗಿನಿಂದ ಅಂದರೆ 1980ರಿಂದಲೇ ನಾನು ಅದರ ಸದಸ್ಯನಾಗಿದ್ದೇನೆ. ಆ ವರ್ಷ ನಾನು ಎಬಿವಿಪಿ ಕಾರ್ಯಕರ್ತನಿಂದ ಭಾಜಪ ಸದಸ್ಯನಾಗಿ ರೂಪಾಂತರಗೊಂಡೆ. ಪೂರ್ಣಾವಧಿಯ ರಾಜಕೀಯ ಕಾರ್ಯಕರ್ತನಾಗುವ ಅಭಿಲಾಷೆ ನನಗೆ ಇರಲಿಲ್ಲ. ಆದಕಾರಣ 1977ರಲ್ಲಿ ನಾನು ವಕೀಲಿ ವೃತ್ತಿ ಆರಂಭಿಸಿದೆ ಹಾಗೂ 1990ರ ವೇಳೆಗೆ ಹಿರಿಯ ವಕೀಲನಾಗಿ ಗುರುತಿಸಲ್ಪಟ್ಟೆ. ನನ್ನ ವೃತ್ತಿಪರ ಜೀವನ ಬೆಳೆದಂತೆ, ಭಾಜಪದಲ್ಲಿ ನನ್ನ ಚಟುವಟಿಕೆಗಳೂ ಹೆಚ್ಚಿದವು. ಕಾರ್ಯಕರ್ತನಾಗಿ, ವಕೀಲನಾಗಿ ಸೇವೆ ಸಲ್ಲಿಸುವ ಇಂಗಿತ ಇತ್ತೆ ಹೊರತು ಪೂರ್ಣ ಪ್ರಮಾಣದ ರಾಜಕಾರಣಿ ಆಗುವ ಕಲ್ಪನೆ ನನಗೆ ಇರಲಿಲ್ಲ. 1980ರಿಂದಲೇ ನಾನು ಭಾಜಪ ರಾಜಕೀಯ ಪ್ರಚಾರತಂತ್ರವನ್ನು ನಿರ್ವಹಿಸುವ ಕಾರ್ಯದಲ್ಲಿ ತೊಡಗಿದ್ದೇನೆ. ಪಕ್ಷದ ರಾಷ್ಟ್ರೀಯ ಕಾರ್ಯಕಾರಣಿ ಸದಸ್ಯನಾಗಿ ಹಾಗೂ ರಾಷ್ಟ್ರೀಯ ವಕ್ತಾರನಾಗಿ ಕಾರ್ಯವಹಿಸಿದ್ದೇನೆ.

1999ರಲ್ಲಿ ನನ್ನ ನಾಯಕರಾದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಹಾಗೂ ಶ್ರೀ ಅಡ್ವಾಣಿ ಅವರು ಎನ್‌ಡಿಎ ಸರ್ಕಾರದ ಸಚಿವರಾಗಿ ಕಾರ್ಯವಹಿಸುವಂತೆ ನನನ್ನು ಕೇಳಿಕೊಂಡಾಗ ಆ ಅವಕಾಶವನ್ನು ನಾನು ಸ್ವೀಕರಿಸಿದ್ದೆ. ಆಗ ನಾನು ಸಂಸದ ಆಗಿರಲಿಲ್ಲ. ಸರ್ಕಾರ ಸೇರಿದ ಬಳಿಕ ನಿಯಮದಂತೆ ಆರು ತಿಂಗಳ ಒಳಗೆ ಗುಜರಾತಿನಿಂದ ರಾಜ್ಯ ಸಭಾ ಸದಸ್ಯನಾಗಿ ಆಯ್ಕೆಗೊಂಡೆ. ಅಂದಿನಿಂದ ನಾನು ಸಂಸತ್‌ನಲ್ಲಿ ಕಾರ್ಯವಹಿಸಿದ್ದೇನೆ. ಸಚಿವನಾಗಿ, ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಅಥವಾ ರಾಜ್ಯ ಸಭಾ ವಿರೋಧ ಪಕ್ಷದ ನಾಯಕನಾಗಿ ನಾನು ಆಯ್ದ ಪ್ರಚಾರಕಾರ್ಯದಲ್ಲಿ ಪಕ್ಷಕ್ಕೆ ನೆರವಾಗಿದ್ದೇನೆ. ಚುನಾವಣಾ ಸಂಘಟನೆಯಲ್ಲಿ ನಿರತನಾದ ನನಗೆ ಈ ಮುನ್ನ ಚುನಾವಣೆಯಲ್ಲಿ ನಿಲ್ಲಲು ಸಾಧ್ಯವಾಗಿರಲಿಲ್ಲ.

ಈ ಬಾರಿ ಪಕ್ಷ ನನ್ನನ್ನು ನನ್ನ ನೆಚ್ಚಿನ ನಗರಿ ಅಮೃತಸರದ ಅಭ್ಯರ್ಥಿಯಾಗಿ ನೇಮಿಸಿದೆ. ಅಮೃತಸರವು ಭಾರತ ದೇಶದ ಬಹು ಮುಖ್ಯ ಧಾರ್ಮಿಕ ಕೇಂದ್ರವಾಗಿದೆ. ನಗರವೂ ತನ್ನದೇ ಆದ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಹೊಂದಿದೆ. ಉತ್ತರ ಭಾರತದ ವ್ಯಾಪಾರಿ ಕೇಂದ್ರವಾಗಿಯೂ ಅದು ಗುರುತಿಸಿಕೊಂಡಿದೆ. ಚಿಕ್ಕ ವಯಸ್ಸಿನಿಂದಲೂ ನಾನು ಈ ನಗರಕ್ಕೆ ಭೇಟಿ ನೀಡುತ್ತಿದ್ದ ಕಾರಣ ಅದರೊಂದಿಗೆ ಅವಿನಾಭಾವ ಸಂಬಂಧ ಬೆಳೆಸಿಕೊಂಡಿದ್ದೇನೆ. ನನ್ನ ತಾಯಿ ಅಮೃತಸರದವಳು. ಆಕೆ ಹುಟ್ಟೂರು ಅಮೃತಸರ. ನನ್ನ ಸೋದರಿ ಜನಿಸಿದ ಊರದು. ಜಮ್ಮು ಹಾಗೂ ಕಾಶ್ಮೀರದವಳಾದ ನನ್ನ ಹೆಂಡತಿ ಹುಟ್ಟಿದ್ದು ಉತ್ತಮ ವೈದ್ಯಕೀಯ ಸೌಲಭ್ಯಗಳಿರುವ ಅಮೃತಸರದಲ್ಲಿ. ಅದು ನನ್ನ ತಾತ ಅಜ್ಜನ ಊರಾದ್ದರಿಂದ, ಸಣ್ಣ ವಯಸ್ಸಿನಿಂದಲೇ ನಾನು ನಗರಕ್ಕೆ ಬಂದುಹೋಗುವುದು ಇರುತ್ತಿತ್ತು. ಹಿಂದಿನಿಂದಲೂ ನಗರದಲ್ಲಿ ನಡೆಯುವ ಎಲ್ಲಾ ಪ್ರಮುಖ ರಾಜಕೀಯ ಪ್ರಚಾರಗಳಲ್ಲಿ ಭಾಗವಹಿಸುತ್ತಾ ಬಂದಿದ್ದೇನೆ. ಸ್ವಾದಿಷ್ಟ ಆಹಾರ ಪ್ರಿಯನಾದ ನಾನು ಅಮೃತಸರದತ್ತ ಆಕರ್ಷಿತನಾಗಿದ್ದೇನೆ. ಎಲ್ಲೂ ಸಿಗದ ರುಚಿಕರ ಭೋಜನವನ್ನು ಅಮೃತಸರದಲ್ಲಿ ಆನಂದಿಸಿದ್ದೇನೆ. ಅಮೃತಸರದಲ್ಲಿ ವಾಸಿಸುವಂತೆ ನನ್ನ ಸ್ನೇಹಿತರಿಂದ, ಪಕ್ಷದ ಸದಸ್ಯರಿಂದ ಹಾಗೂ ನನ್ನ ಸಂಬಂಧಿಕರಿಂದ ಆಮಂತ್ರಣಗಳು ಸಾಲುಸಾಲಾಗಿ ಬಂದಿವೆ. ನಗರದಲ್ಲಿ ದೀರ್ಘಾವಧಿ ತಂಗಲು ಉತ್ಸುಕನಾಗಿದ್ದೇನೆ.

ನಾನು ಸ್ಪರ್ಧಿಸುವಂತೆ ಮನವೊಲಿಸಲು ಪ್ರೇರಕರಾದ ನನ್ನ ಸ್ನೇಹಿತರಾದ ನವಜೋತ್ ಸಿಂಗ್ ಸಿದ್ದು ಅವರಿಗೆ ನನ್ನ ಕೃತಜ್ಞನೆಗಳು ಹಾಗೂ ಧನ್ಯವಾದಗಳು. ನವಜೋತ್ ಹಾಗೂ ನನ್ನ ಸಂಬಂಧ ರಾಜಕೀಯ ನೆಲೆಗಿಂತ ಮೇಲ್ಪಟ್ಟದ್ದಾಗಿದೆ. ಅವರನ್ನು ಅವರ ಮತಕ್ಷೇತ್ರದಿಂದ ಒಕ್ಕಲೆಬ್ಬಿಸುವ ಬಯಕೆ ನನಗಿರಲಿಲ್ಲ. ಅಮೃತಸರದಿಂದ ನಾನು ಚುನಾವಣೆ ಎದುರಿಸಬೇಕು ಎಂದು ಅವರು ಕಳೆದ ಹಲವಾರು ದಿವಸಗಳಿಂದ ನನ್ನನ್ನು ಒತ್ತಾಯಿಸುತ್ತಿದ್ದರು. ಅಮೃತಸರ ಅಥವಾ ಅನ್ಯ ಮತಕ್ಷೇತ್ರಗಳಾದ ಕುರುಕ್ಷೇತ್ರ ಹಾಗೂ ಪಶ್ಚಿಮ ದೆಹಲಿಯಲ್ಲಿ ಸ್ಪರ್ಧಿಸುವಂತೆ ನಾನು ಅವರನ್ನು ಹಲವಾರು ಬಾರಿ ಕೋರಿದ್ದೆ. ಪಕ್ಷದ ಅಧ್ಯಕ್ಷರೂ ಸಹ ಅವರಲ್ಲಿ ಹಲವುಬಾರಿ ಮನವಿ ಮಾಡಿದ್ದರು. ಸಜ್ಜನಿಕೆಗೆ ಗುರುತಾದ ಅವರು ವೈಯಕ್ತಿಕ ಅಥವಾ ರಾಜಕೀಯ ಲಾಭಗಳಿಸುವ ಆಕಾಂಕ್ಷಿಗಳು ತಾವಲ್ಲವೆಂದು ಸ್ಪಷ್ಟ ಪಡಿಸಿದರು. ಅವರ ಸಜ್ಜನಿಕೆ ಹಾಗೂ ಘನತೆ ಬಿಂಬಿಸುವ ಅವರ ನಡವಳಿಕೆಯು ಬೇರೆ ರಾಜಕಾರಣಿಗಳಿಗೆ ಮಾದರಿಯಾಗಿದೆ. ಕ್ರಿಕೆಟ್ಟಿನಲ್ಲಿ ಅವರು ಖ್ಯಾತ ಬ್ಯಾಟ್ಸ್‌ಮ್ಯಾನ್ ಆಗಿದ್ದರು. ಈ ಬಾರಿ ಅವರ ನಡೆಯಿಂದ ನಾನು ಕ್ಲೀನ್ ಬೋಲ್ಡ್ ಆಗಿದ್ದೇನೆ.

✲✲✲✲✲